ವ್ಯಕ್ತಿತ್ವದಲ್ಲೇ ಸೇರಿ ಹೋಗಿದೆ. ಅದೇನೆಂದು ಸರಿಯಾಗಿ ನನಗೂ ಅರ್ಥವಾಗದಿದ್ದರೂ ಘನವಾದ ಯಾವುದೋ ಒಂದಕ್ಕೆ ಸಲ್ಲುತ್ತಿದ್ದೇನೆ ಎಂಬ ಭಾವ ನಡಿಗೆಯಲ್ಲಿ, ಮಾತಿನಲ್ಲಿ ವ್ಯಕ್ತವಾಗುತ್ತಿದೆಯೇನೋ ಅಂತ ನನಗೆ ಅನುಮಾನ. ಜೊತೆಗೆ ನಿಧಾನವಾಗಿ ರೌಡಿಗಳ ರಾಜ್ಯದಲ್ಲಿ ನನಗೆ ವಿಶೇಷ ಮರ್ಯಾದೆಯಿರುವುದು ಗಮನಕ್ಕೆ ಬಂದು ಹಿಗ್ಗಾಗುತ್ತಿದೆ.

ನೋಡನೋಡುತ್ತಲೇ ಯಾರೋ ಆಫೀಸಿಗೆ ಬಂದು ಕಬ್ಬಿಣದ ಹಿಡಿಕೆಗಳಿರುವ ಬ್ಯಾಗುಗಳನ್ನು ಇಟ್ಟು ಹೋಗುವುದು, ಅನಂತರ ಇನ್ನ್ಯಾರೋ ಅದನ್ನು ಕೊಂಡೊಯ್ಯುವುದು ಎಲ್ಲ ಶುರುವಾಗಿದ್ದವು. ದಾದಾನಿಗೆ ಆತ್ಮಕತೆ ಬರೆದುಕೊಟ್ಟ ನಮ್ಮ ಪ್ರೆಸ್ಸಿನ ಹುಡುಗ ರಾಕೇಶ ವಿಚಿತ್ರ ಖದರಿನಿಂದ ಓಡಾಡತೊಡಗಿದ್ದ. ಹತ್ತು ಸಾವಿರ ಪ್ರತಿ ಬೇಕೆಂದಿದ್ದ ದಾದಾ, ಅನಂತರ ಇಪ್ಪತ್ತೈದು ಸಾವಿರ ಪ್ರತಿಗಳನ್ನು ಅಚ್ಚಿಗೆ ಹಾಕಿಸಿ ಕೊಂಡುಕೊಂಡಿದ್ದು ನನ್ನ ಬಾಯಿ ಕಟ್ಟಿಸಿತ್ತು. ನಾನು ಹಿಂದೆಂದೂ ಕಾಣದಿದ್ದ ವೇಗದಲ್ಲಿ ಹಣದ ಹೊಳೆ ಹರಿಯಲು ಶುರುವಾಯಿತು. ಇದೆಲ್ಲವನ್ನೂ ವಾರೆನೋಟದಲ್ಲೇ ವೀಕ್ಷಿಸುತ್ತಿದ್ದ ಸುನೇತ್ರಾ, “ಇದೆಲ್ಲ ಒಳ್ಳೆಯದಕ್ಕಲ್ಲ ಅಣ್ಣಾ” ಎಂದಾಗ ಉದಾಸೀನ ಮಾಡಿದೆ.

ಇನ್ನೊಂದಿಬ್ಬರು ರೌಡಿಗಳು ನಮ್ಮ ಪುಸ್ತಕವನ್ನೂ ಬರೆಸಿ ಕೊಡಿ ಅಂತ ಆಫೀಸಿಗೆ ಬಂದು ಕೂಡಲು ಶುರು ಮಾಡಿದ್ದರು. ಭೂಗತ ದೊರೆಗಳ ಬಗ್ಗೆಯಷ್ಟೇ ಪುಸ್ತಕ ಪ್ರಕಟಿಸೋದು, ಪುಡಿ ರೌಡಿಗಳ ಬಗ್ಗೆ ಅಲ್ಲ ಅಂತ ಹೇಳಿದರೆ ಅವರಿಗೆಲ್ಲಿ ಅರ್ಥ ಆಗಬೇಕು. “ಏನ್ರೀ ಹಂಗಂದ್ರೆ? ಅವನಾದ್ರೆ ಆಗ್ತಾನೆ ನಾನಾಗಲ್ವಾ ನಿಮಗೆ?” ಅಂತ ಕೇಳಿ ನನ್ನನ್ನೇ ಬೆಚ್ಚಿಬೀಳಿಸುತ್ತಿದ್ದರು.

ಕ್ರಮೇಣ ದಾದಾ ಮತ್ತವನ ಚೇಲಾಗಳು ಈ ಪುಡಿ ರೌಡಿಗಳನ್ನು ನೆಟ್ಟಗೆ ಮಾಡುತ್ತಿದ್ದರೂ ದಿನಕ್ಕೊಂದು ಹೊಸ ಪ್ರಕರಣವಾಗುವುದೇನೂ ತಪ್ಪುತ್ತಿರಲಿಲ್ಲ. ನಾನೂ ಯಾವುದಕ್ಕೂ ಸೇಫ್ಟಿಗಿರಲಿ ಅಂತ ನಿತ್ಯದ ಸಮಯ ತಪ್ಪಿಸಿ ಯಾವುಯಾವುದೋ ಸಮಯಕ್ಕೆ ಮನೆಗೆ ಹೋಗಲು ಶುರು ಮಾಡಿದ್ದೆ.

ಲಾವಣ್ಯಳ ನಡವಳಿಕೆಯಲ್ಲಿ ಇತ್ತೀಚೆಗೆ ವಿಲಕ್ಷಣ ಬದಲಾವಣೆಗಳಾಗ ಹತ್ತಿದ್ದವು. ಅದು ಒಂದು ಮಿತಿ ಮೀರುವ ತನಕ ನನಗೆ ಹೇಗೆ ತಿಳಿಯಲಿಲ್ಲ ಅಂತ ನನಗೇ ಆಶ್ಚರ್ಯವಾಗುತ್ತದೆ. ಮೊದಲೆಲ್ಲ ನಾನೇನೇ ಅಂದರೂ ಹತ್ತು ಬಾರಿ ‘ಸಾರಿ ರೀ ಗೊತ್ತೇ ಆಗಲಿಲ್ಲ, ಸಾರಿ ರೀ ನನ್ನದೇ ತಪ್ಪು’ ಅನ್ನುತ್ತ ಎಲ್ಲವನ್ನೂ ಸರಿ ಮಾಡುತ್ತಿದ್ದವಳು ಈಗ ಒಂದೇ ಒಂದು ಬಾರಿಯಾದರೂ ಕ್ಷಮಿಸಿ ಅನ್ನುವ ಪದ ಬಾಯಲ್ಲಿ ಬರುವುದಿಲ್ಲ. ಏನು ಹೇಳಿದರೂ ಮುಖ ದಪ್ಪಗೆ ಮಾಡಿಕೊಂಡು ಕೆಲಸ ಮಾಡುತ್ತಲೇ ಇರುತ್ತಾಳೆ. “ಏನೇ ಭೋಸುಡಿ, ಮುಖಕ್ಕೇನು ಲಕ್ವ ಹೊಡೆದಿದೆಯೇ? ನಗುನಗುತ್ತ ಇರೋಕೇನು ಧಾಡಿ?” ಎಂದರೆ “ನನಗೇನು ಆಗಿದೆ ರೀ, ಯಾಕೆ ಹಾಗೆ ಕೆಟ್ಟ ಮಾತೆಲ್ಲ ಆಡುತ್ತೀರಾ?” ಅಂತ ಎದುರು ನುಡಿಯುತ್ತಾಳೆ. “ಮನೆಯ ಗಂಡಸರನ್ನ ಹೇಗಿಟ್ಟುಕೋಬೇಕು ಅಂತ ಗೊತ್ತಿರಬೇಕು. ಬರಬರುತ್ತ ರಾಯರ ಕುದುರೆ ಕತ್ತೆಯಾಗಿದೆ” ಅಂದರೆ, ಮತ್ತದೇ ಮುಖ ಉಬ್ಬಿಸಿ ಕೂಡುತ್ತಾಳೆ.

ಮತ್ತು ಸುನೇತ್ರಾಳೊಂದಿಗಿನ ಲಾವಣ್ಯಳ ಜಂಗೀ ದೋಸ್ತಿಯೂ ನನ್ನಲ್ಲಿ ಕರಕರೆ ಹುಟ್ಟಿಸುತ್ತದೆ. ನನ್ನ ಬಳಿ ಉಪ್ ಅಂತಿದ್ದರೂ ಸುನೇತ್ರಳೊಂದಿಗೆ ಅವಳ ಮಾತೇನು, ಕತೆಯೇನು, ಕಿಕ್ಕಿಕ್ಕೀ ನಗೆಯೇನು. ಲೋಕಾರೂಢಿಯಂತೆ ಗಂಡನನ್ನು ಬಿಟ್ಟುಬಂದ ನಾದಿನಿ ಮನೆಯಲ್ಲಿರುವ ಅತ್ತಿಗೆಯೊಂದಿಗೆ ವೈಮನಸ್ಸು ತಂದುಕೊಳ್ಳುತ್ತ, ಕಿತ್ತಾಡುತ್ತ ಇರುವುದನ್ನು ಬಿಟ್ಟು ಇವರಿಬ್ಬರೂ ಜೊತೆಗೆ ಶಾಪಿಂಗ್ ಹೋಗುವುದೇನು, ಸ್ಪಾನಲ್ಲಿ ಗಂಟೆಗಟ್ಟಲೆ ಸ್ಟೀಮ್ ಬಾತ್ ಮಾಡುವುದೇನು, ಜೊತೆಜೊತೆಗೆ ಒಂದೇ ಬಣ್ಣದ ನೇಲ್ ಪಾಲಿಶ್ ಹಚ್ಚಿಕೊಳ್ಳುವುದೇನು. ಲಾವಣ್ಯಳದ್ದು ಅಮ್ಮನೊಂದಿಗೆ ಏನೇ ತಕರಾರಿದ್ದರೂ ಸುನೇತ್ರಾ ಅತ್ತಿಗೆಯ ಬದಿಗೇ. ಮತ್ತು ಕೋಣೆಯ ಬಾಗಿಲು ಮರೆ ಮಾಡಿ ಗುಸ್‌ಗುಸಾ–ಪಿಸ್‌ಪಿಸಾ ಶುರು ಮಾಡಿದರೆ ಗಂಟೆಗಳು ಸರಿದು ಹೋದರೂ ಇವರಿಗೆ ಲಕ್ಷ್ಯವೇ ಇಲ್ಲ. ನಾನು ಕೋಣೆ ಹೊಕ್ಕೊಡನೆ ಮಾತಿನ ವಿಷಯವನ್ನು ಧಾಟಿ ಬದಲಿಸದೇ ಹೊರಳಿಸುವುದನ್ನು